ಮೊದಲ ಬಾರಿಗೆ ಲಕ್ಷ್ಮಿಯನ್ನು ತಂದರು. ಆ ಚಿತ್ರ ಅನಂತನಾಗ್ ಕೆರಿಯರ್‌ನಲ್ಲೇ ವಿಶಿಷ್ಟ ಚಿತ್ರವಾಯಿತು. ಮುಂದೆ ಅನಂತ್–ಲಕ್ಷ್ಮಿ ಜೋಡಿ ಕನ್ನಡಿಗರ ನೆಚ್ಚಿನ ತಾರಾಜೋಡಿಯಾಗಿ ಅನೇಕ ಚಿತ್ರಗಳಲ್ಲಿ ನಟಿಸಿ ಅಪಾರ ಯಶಸ್ಸು ಗಳಿಸಿತು.

'ಆಟೋ ರಾಜ'ನಾಗಿ ಶಂಕರ್‌ನಾಗ್ ಅವರನ್ನು ಕಾಸ್ಟ್ ಮಾಡಿದ್ದು ಕೂಡ ವಿಜಯ್ ಅವರ ಒಂದು ಪ್ರಯೋಗವೇ. ಶಂಕರ್ ಅವರನ್ನು ಆಟೋ ಚಾಲಕರ ಫೇವರೆಟ್ ಹೀರೋವನ್ನಾಗಿ ಮಾಡಿದ ಚಿತ್ರವದು. ಚಿತ್ರದ ಕಥೆ ಚೆನ್ನಾಗಿದ್ದದ್ದು ಹಾಗೂ ಶಂಕರ್ ಅವರಿಗೆ ಅದು ಅತ್ಯಂತ ಸೂಕ್ತವಾದ ಪಾತ್ರವಾಗಿದ್ದರಿಂದ ಅಷ್ಟು ದೊಡ್ಡ ಯಶಸ್ಸು ಕಂಡಿತು ಎನ್ನುವುದು ವಿಜಯ್ ಅವರ ವಿಶ್ಲೇಷಣೆ.

'ಮಯೂರ', 'ಗಂಧದ ಗುಡಿ', 'ಸನಾದಿ ಅಪ್ಪಣ್ಣ'ದಂಥ ಉತ್ತಮ ಅಭಿರುಚಿಯ, ಕಲಾತ್ಮಕ ಮೌಲ್ಯದ ಚಿತ್ರಗಳನ್ನು ನಿರ್ದೇಶಿಸಿದ ವಿಜಯ್ ಮುಂದೆ ತಾಯಿ ಸೆಂಟಿಮೆಂಟ್‌ನ ಚಿತ್ರಗಳ ಹಾದಿಗೆ ಹೊರಳಿದರು; 'ತಾಳಿಯ ಭಾಗ್ಯ', 'ತಾಯಿ ನಾಡು', 'ತಾಯಿ ಕನಸು', 'ತಾಯಿಯ ಹೊಣೆ', 'ತಾಯಿಯೇ ನನ್ನ ದೇವರು' ಮುಂತಾದ ಹಲವು ಚಿತ್ರಗಳನ್ನು ಮಾಡಿದರು. ಅವರ ಅಂಥ ಹೆಚ್ಚಿನ ಚಿತ್ರಗಳ ನಿರ್ಮಾಪಕರಾಗಿದ್ದವರು ಅಬ್ಬಯ್ಯ ನಾಯ್ಡು. ಮುಂದೆ ಅಂಥ ಚಿತ್ರಗಳು ಕನ್ನಡದಲ್ಲಿ 'ಅಬ್ಬಯ್ಯ ನಾಯ್ಡು ಬ್ರಾಂಡ್'ನ ಚಿತ್ರಗಳು ಎಂದೇ ಹೆಸರಾದವು. ಅವುಗಳ ಪೈಕಿ ಹೆಚ್ಚಿನವು ಹಿಟ್ ಆಗಿದ್ದಷ್ಟೇ ಅಲ್ಲ, ಹಿಂದಿಗೂ ರೀಮೇಕ್ ಆದವು. ತಮ್ಮ ಕೆರಿಯರ್‌ನ ಆರಂಭದಲ್ಲಿ ಸತತವಾಗಿ



ಒಲವೇ ನಮ್ಮ ಬದುಕು; ಪತ್ನಿ ದಮಯಂತಿ ಜೊತೆ ವಿಜಯ್

ರಾಜ್ ಸಿನಿಮಾಗಳನ್ನು ನಿರ್ದೇಶಿಸಿದ ವಿಜಯ್, ವೃತ್ತಿಬದುಕಿನ ಕೊನೆಗಾಲದಲ್ಲಿ 'ದೇವ', 'ಕುಂತಿಪುತ್ರ', 'ಮೋಜುಗಾರ ಸೊಗಸುಗಾರ', 'ಕರ್ನಾಟಕ ಸುಪುತ್ರ' – ಹೀಗೆ ಒಂದರ ಹಿಂದೊಂದರಂತೆ ವಿಷ್ಣುವರ್ಧನ್ ಅವರ ಚಿತ್ರಗಳನ್ನು ನಿರ್ದೇಶಿಸಿದರು. 1996ರಲ್ಲಿ ಬಂದ 'ಕರ್ನಾಟಕ ಸುಪುತ್ರ' ಚಿತ್ರವೇ ಪ್ರಾಯಶಃ ಇವರ ನಿರ್ದೇಶನದ ಕೊನೆಯ ಚಿತ್ರ. ಅದಾದ ನಂತರವೂ ವಿಜಯ್ ಚಿತ್ರಗಳನ್ನು ನಿರ್ಮಿಸುವುದರ ಮೂಲಕ ಚಿತ್ರರಂಗದಲ್ಲಿ ಸಕ್ರಿಯರಾಗಿದ್ದರು. ಪ್ರಸಿದ್ಧ ನಿರ್ದೇಶಕ ವಿ. ಸೋಮಶೇಖರ್ ಜೊತೆಗೂಡಿ ಚಿತ್ರ ನಿರ್ಮಾಣ ಸಂಸ್ಥೆಯನ್ನು ಆರಂಭಿಸಿ ಅದರಡಿಯಲ್ಲಿ ಹಲವು ಚಿತ್ರಗಳನ್ನು ನಿರ್ಮಿಸಿದ್ದರು.

ರಾಜ್‌ಕುಮಾರ್ ಅವರಿಗಾಗಿ 'ಗಂಧದ ಗುಡಿ' ನಿರ್ದೇಶಿಸಿದ್ದ ವಿಜಯ್ ಅಣ್ಣಾವ್ರ ಹಿರಿಯ ಮಗ ಶಿವರಾಜ್‌ಕುಮಾರ್ ಅವರಿಗಾಗಿ 'ಗಂಧದ ಗುಡಿ ಭಾಗ 2' ನಿರ್ದೇಶಿಸಿದರು. ಆದರೆ ಆ ಚಿತ್ರ ಅಷ್ಟು ಯಶಸ್ಸು ಕಾಣಲಿಲ್ಲ.

## ಸಿನಿಮಾನೇ ಸರ್ವಸ್ವ

ರಾಜ್‌ಕುಮಾರ್ ಅವರಂತೆ ವಿಜಯ್ ಅವರಿಗೂ ಸಿನಿಮಾವೊಂದೇ ಬದುಕಿನ ಏಕೈಕ ಶ್ರದ್ಧೆಯಾಗಿತ್ತು; ಸಂಸಾರ, ಮಕ್ಕಳು, ಅವರ ಓದು ಎಲ್ಲವನ್ನೂ ನೋಡಿಕೊಂಡಿದ್ದು ಅವರ ಪತ್ನಿ ದಮಯಂತಿಯವರೇ. ರಾಜ್ ಅವರನ್ನು ಅಪಾರವಾಗಿ ಮೆಚ್ಚುವ ವಿಜಯ್, ಅಣ್ಣಾವ್ರಂತೆಯೇ ತಮ್ಮೆಲ್ಲ ಸಾಧನೆಯನ್ನು ದೇವರಿಗೆ ಅರ್ಪಿಸುತ್ತಾರೆ. ತಮ್ಮ ಚಿತ್ರಗಳ ವೈವಿಧ್ಯ, ವಿಸ್ತಾರ, ಕಲಾತ್ಮಕ ಮೌಲ್ಯ ಹಾಗೂ ಯಶಸ್ಸುಗಳಿಂದಾಗಿ ವಿಜಯ್ ಕನ್ನಡದ ಶ್ರೇಷ್ಠ ನಿರ್ದೇಶಕರ ಸಾಲಿನಲ್ಲಿ ನಿಲ್ಲುತ್ತಾರೆ. 'ಅಷ್ಟೆಲ್ಲ ವೈವಿಧ್ಯಮಯ ಕಥೆಯ ಯಶಸ್ವೀ ಚಿತ್ರಗಳನ್ನು ನಿರ್ದೇಶಿಸಲು ನಿಮಗೆ ಹೇಗೆ ಸಾಧ್ಯವಾಯಿತು' ಅಂದರೆ, ಅದರಲ್ಲಿ ತನ್ನ ಪಾತ್ರವೇನೂ ಇಲ್ಲ ಎನ್ನುವಂತೆ ಅತ್ಯಂತ ಸಹಜ ವಿನಯದಿಂದ 'ಅದು ದೇವರು ಕೊಟ್ಟ ಶಕ್ತಿ ಅಷ್ಟೇ' ಎನ್ನುತ್ತಾರೆ. ರಾಜ್ ಅವರನ್ನು ಕನ್ನಡದ ಕಣ್ಮಣಿಯಾಗಿಸುವಲ್ಲಿ ವಿಜಯ್ ನಿರ್ದೇಶನದ ಚಿತ್ರಗಳು ಹಾಗೂ ಆ ಚಿತ್ರಗಳ ಹಾಡುಗಳೂ ಪಾತ್ರ ವಹಿಸಿದ್ದವು. ರಾಜ್ ಅವರಿಗಾಗಿ 'ಭಕ್ತ ಅಂಬರೀಶ' ಸಿನಿಮಾ ನಿರ್ದೇಶಿಸಬೇಕೆಂದು ವಿಜಯ್ ಸಿದ್ಧತೆ ನಡೆಸಿದ್ದರಂತೆ. ಆದರೆ, ಹಲವು ಕಾರಣಗಳಿಂದ ಅದು ಸಾಧ್ಯವಾಗದೇ ಆ ಆಸೆ ಆಸೆಯಾಗಿಯೇ ಉಳಿದುಹೋಯಿತು ಎನ್ನುತ್ತಾರೆ.

ವಿಜಯ್ ಅವರ ಚಿತ್ರಗಳ ದೊಡ್ಡ ಶಕ್ತಿಯಾಗಿದ್ದವರು ಚಿತ್ರ ಬರಹಗಾರರಾದ ಉದಯಶಂಕರ್ ಹಾಗೂ ಎಂ.ಡಿ. ಸುಂದರ್. ವಿಜಯ್ ಅವರ ಹೆಚ್ಚಿನ ಚಿತ್ರಗಳ ಸ್ಕ್ರಿಪ್ಟ್ ಹಾಗೂ ಸಾಹಿತ್ಯದಲ್ಲಿ ಅವರಿಬ್ಬರ ಪಾತ್ರ ಮಹತ್ವವಾದುದಾಗಿತ್ತು. ಚೆನ್ನೈ ಮೂಲದ ಸುಂದರ್ ಅವರನ್ನು ಕನ್ನಡ ಚಿತ್ರರಂಗಕ್ಕೆ ಪರಿಚಯಿಸಿದವರೇ ವಿಜಯ್. ಮುಂದಿನ ದಿನಗಳಲ್ಲಿ ಸುಂದರ್ ಕನ್ನಡ ಚಿತ್ರರಂಗದ ಅವಿಭಾಜ್ಯ ಅಂಗವಾಗಿದ್ದು ಮಾತ್ರವಲ್ಲದೇ, ವ್ಯಾಪಾರಿ ಚೌಕಟ್ಟಿನ ಚಿತ್ರಗಳಲ್ಲಿ ಅನೇಕ ಪ್ರಯೋಗಗಳನ್ನು ಮಾಡಿದರು; ಚಿತ್ರಬರಹಗಾರರಾಗಿ ಭಾರಿ ಯಶಸ್ಸು ಗಳಿಸಿದರು. ವಿಜಯ್ ಅವರ ಪ್ರತಿಭೆ, ಉತ್ತಮ ಅಭಿರುಚಿ, ತಾಂತ್ರಿಕ ಪರಿಣತಿಗಳ ಜೊತೆಗೆ ಸುಂದರ್–ಶಂಕರ್ ಜೋಡಿಯ ಪ್ರತಿಭೆಯೂ ಸಂಗಮಗೊಂಡು ಕನ್ನಡ ಚಿತ್ರರಂಗದ ಅತ್ಯಂತ ಶ್ರೇಷ್ಠ ಹಾಗೂ ಯಶಸ್ವಿ ಚಿತ್ರಗಳು ರೂಪು ಪಡೆದವು.

ಕನ್ನಡ ಚಿತ್ರಗಳ ಜೊತೆಗೆ ವಿಜಯ್ – 'ಪ್ಯಾರ್ ಕಿಯಾ ತೋ ಪ್ಯಾರ್ ಕರೇಂಗಾ', 'ಗಂಗಾ ತೇರೆ ದೇಶ್ ಮೆ', 'ಶ್ರೀಮಾನ್ ಶ್ರೀಮತಿ', 'ಶ್ರೀಮಾನ್ 420', 'ಅಗ್ನಿಪುತ್ರ', 'ಜೀನಾ ಮರ್ನಾ ತೇರೆ ಸಂಗ್' ಮುಂತಾಗಿ ಹಿಂದಿಯಲ್ಲಿ 17 ಸಿನಿಮಾಗಳನ್ನು ನಿರ್ದೇಶಿಸಿದ್ದಾರೆ. ಕೆ.ಸಿ. ಬೊಕಾಡಿಯಾ ನಿರ್ಮಾಣದ ಚಿತ್ರಗಳ ನಿರ್ದೇಶಕರೆಂದೇ ಹಿಂದಿಯಲ್ಲಿ ವಿಜಯ್ ಖ್ಯಾತಿ ಪಡೆದಿದ್ದರು. 'ಏಕಲವ್ಯ', 'ಮಾವೂರಿ ಮೊನಗಾಳ್ಳು', 'ಮಾ ಇಂಟಿ ವೆಲುಗು' ಸೇರಿದಂತೆ ತಮ್ಮ ಮಾತೃಭಾಷೆ ತೆಲುಗಿನಲ್ಲಿ ಅವರು ನಿರ್ದೇಶಿಸಿದ್ದು ಬೆರಳೆಣಿಕೆಯ ಚಿತ್ರಗಳನ್ನು ಮಾತ್ರ; ಅವುಗಳಲ್ಲಿ ಹೆಚ್ಚಿನವು ಬಿ. ನಾಗಿರೆಡ್ಡಿ ನಿರ್ಮಾಣದ ಚಿತ್ರಗಳು.

ಕನ್ನಡ, ತೆಲುಗು, ಹಿಂದಿ – ಮೂರು ಭಾಷೆಗಳಲ್ಲಿ ಚಿತ್ರ ನಿರ್ದೇಶಿಸಿದರೂ ವಿಜಯ್ ಅವರಿಗೆ ಹೆಚ್ಚು ಯಶಸ್ಸು ಸಿಕ್ಕಿದ್ದು ಕನ್ನಡದಲ್ಲಿಯೇ. ಅದರಲ್ಲೂ ಮುಖ್ಯವಾಗಿ ರಾಜ್–ವಿಜಯ್ ಜೋಡಿಯ ಚಿತ್ರಗಳು ಸಾರ್ವಕಾಲಿಕ ಶ್ರೇಷ್ಠ ಚಿತ್ರಗಳಾಗಿ ಹೊಮ್ಮಿದವು. 'ಶ್ರೀ ಶ್ರೀನಿವಾಸ ಕಲ್ಯಾಣಂ' ಎನ್ನುವ ಮೆಗಾ ಸೀರಿಯಲ್ ಅನ್ನೂ ಇವರು ನಿರ್ದೇಶಿಸಿದ್ದಾರೆ. ಸಿನಿಮಾನೇ ಜೀವನ ಎಂದು ಭಾವಿಸಿರುವ ವಿಜಯ್, ಕೆಲವೇ ವರ್ಷಗಳ ಹಿಂದೆ ಮತ್ತೊಂದು ಚಿತ್ರ ಮಾಡುತ್ತೇನೆ ಎಂದು ಹೊರಟಿದ್ದರಂತೆ. ಅಷ್ಟರಲ್ಲಿಯೇ ಅವರ ಆರೋಗ್ಯ ಕ್ಷೀಣಿಸಿ ಹಾಸಿಗೆ ಹಿಡಿದಿದ್ದರಿಂದ ಆ ಯೋಚನೆಯನ್ನು ಬಿಟ್ಟರು ಎಂದು ಅವರ ಮಗ ಅಪ್ಪನ ಸಿನಿಮಾ ಮೋಹವನ್ನು ನೆನಪಿಸಿಕೊಳ್ಳುತ್ತಾರೆ. ಆಗೆಲ್ಲ ಚಿತ್ರ ನಿರ್ದೇಶಕರಿಗೆ ಹೇಳಿಕೊಳ್ಳುವಂಥ ಹೆಸರೂ ಸಿಗುತ್ತಿರಲಿಲ್ಲ, ಉತ್ತಮ ಎನ್ನುವಂಥ ಸಂಭಾವನೆಯೂ ಸಿಗುತ್ತಿರಲಿಲ್ಲ. ದೊಡ್ಡ ಯಶಸ್ಸಿನ ಚಿತ್ರಗಳನ್ನು ಕೊಟ್ಟ ನಂತರವೂ ವಿಜಯ್ ಅವರ ಸಂಭಾವನೆ ಕೆಲವೇ ಸಾವಿರಗಳಷ್ಟಿತ್ತು. ಆ ಕಾರಣಕ್ಕೆ ಅವರು ಮಕ್ಕಳನ್ನು ಚಿತ್ರರಂಗಕ್ಕೆ ಸೇರುವಂತೆ ಪ್ರೋತ್ಸಾಹಿಸಲಿಲ್ಲ. ಹಿರಿಯ ಮಗ ತ್ರಿನಾಥ್ ರೆಡ್ಡಿ ಅಪ್ಪನೊಂದಿಗೆ ಒಂದೆರಡು ಚಿತ್ರಗಳ ನಿರ್ಮಾಣ ಕಾರ್ಯದಲ್ಲಿ ಪಾಲ್ಗೊಂಡರಾದರೂ ನಂತರ ಇಸ್ರೋ ಸೇರಿಕೊಂಡು ವಿಜ್ಞಾನಿಯಾದರು. ಕಿರಿಯ ಮಗ ನಾಗಿರೆಡ್ಡಿ ಕೂಡ ಒಂದೆರಡು ಚಿತ್ರಗಳನ್ನು ನಿರ್ಮಿಸಿದರು. ನಂತರ ಅವರು ಸಿನಿಮಾ ಬಿಟ್ಟು ರಿಯಲ್ ಎಸ್ಟೇಟ್ ಉದ್ಯಮದತ್ತ ವಾಲಿದರು. ಅವರೀಗ ಚೆನ್ನೈನ ದೊಡ್ಡ ಬಿಲ್ಡರ್‌ಗಳಲ್ಲೊಬ್ಬರು. ಅಲ್ಪಸ್ವಲ್ಪ ವಿಜಯ್ ರೆಡ್ಡಿಯವರ ಹಾದಿ ತುಳಿದಿದ್ದು ಅವರ ಅಳಿಯ ಶ್ರೀನಿವಾಸ ರೆಡ್ಡಿ ಒಬ್ಬರೇ. ಅವರು ಕನ್ನಡದಲ್ಲಿ 'ಅಲೆಕ್ಸಾಂಡರ್', 'ಅಗ್ನಿಪಂಜರ', 'ಕಿಲ್ಲರ್ ಡೈರಿ', 'ಸತ್ವಪರೀಕ್ಷೆ'ಯಂಥ ಹಲವು ಚಿತ್ರಗಳನ್ನು ನಿರ್ದೇಶಿಸಿದರು. ನಂತರ ಅವರೂ ಕೂಡ ಸಿನಿಮಾ ರಂಗದಿಂದ ದೂರವಾದರು.

ವಿಜಯ್ ಅವರನ್ನು ಮಾತನಾಡಿಸಿಕೊಂಡು ನಾವು ಹೊರಟು ನಿಂತಾಗ ಕ್ಷಣ ನಮ್ಮನ್ನು ತಡೆದ ಅವರು, ಪ್ರತಿದಿನ ತನ್ನನ್ನು ಎತ್ತಿ ಕೂರಿಸುವ, ಮಲಗಿಸುವ, ಊಟ ಮಾಡಿಸುವ ಕೆಲಸದ ಹುಡುಗನನ್ನು ಕರೆದು ಪಕ್ಕದಲ್ಲಿ ನಿಲ್ಲಿಸಿಕೊಂಡು – 'ನಮ್ಮಿಬ್ಬರದ್ದೊಂದು ಫೋಟೋ ತೆಗೆಯಿರಿ' ಎಂದರು. ಅದು ವಿಜಯ್ ಅವರ ವ್ಯಕ್ತಿತ್ವ. ಅವರ ವ್ಯಕ್ತಿತ್ವದಲ್ಲಿನ ವಿನಯ, ಮೆಲುಮಾತು ಹಾಗೂ ಮಾರ್ದವತೆ ಅವರ ಚಿತ್ರಗಳಲ್ಲೂ ನಮಗೆ ಕಾಣುವುದು ಕಾಕತಾಳೀಯವೇನಲ್ಲ. ■